



ತಡೆಯುವ ಶಕ್ತಿ ಕಡಿಮೆ ಇರುತ್ತದೆ. ಇದಕ್ಕೆ ಅನುಗುಣವಾದ ಆಭರಣ ಖರೀದಿಸಬೇಕು. ಕುತ್ತಿಗೆಗೂ ಸೆಕೆಯಾಗದಂತೆ ಚುಚ್ಚದಂತಿರುವ ಆಭರಣವಾಗಿರಲಿ. ನೈಗೆಗಳು ಸದೃಢವಾಗಿದ್ದು ತುಂಡಾಗದಿರಲಿ. ಬಳೆಗಳು ಬಣ್ಣದ ಬಳೆಗಳೊಂದಿಗೆ ಬೆರೆಯುವಂತೆ ಇರಲಿ. ಒಂದೇ ಹಾಕುವುದಿದ್ದರೆ ಹಗುರವಾದ ಬಳೆಯಾಗಿರಲಿ. ಉಂಗುರದಲ್ಲಿ ಹೊಳಪಿದ್ದು ಬೆರಳ ಸೈಜ್‌ನಲ್ಲೇ ಇರಲಿ.

## ದಿರಿಸಿಗೆ ಅನುಗುಣವಾಗಿರಲಿ

ಮಕ್ಕಳಿಗೆ ಇಂದು ಲೆಹಂಗಾ, ಸ್ಕರ್ಟ್, ಕುರ್ತಾ, ಉದ್ದಲಂಗ, ಸಣ್ಣ ಸಾರಿ, ಹಾಫ್‌ಸಾರಿ... ಹೀಗೆ ಎಲ್ಲಾ ತರದವು ಇದೆ. ಸಮಾರಂಭಗಳಿಗೆ ಸಾಧಾರಣ ಲೆಹಂಗಾದಂತಹವನ್ನೇ ಹಾಕುವುದರಿಂದ ಎಳೆ ಎಳೆಯಾಗಿರುವ ಸರ, ಆಭರಣದಲ್ಲಿ ಪೆಂಡೆಂಟ್‌ಗಳು ಇದ್ದಲ್ಲಿ ಬಟ್ಟೆಯ ಬಣ್ಣದ್ದಾಗಿರುವ ಇಲ್ಲಾ ಬಟ್ಟೆಯ ಬಣ್ಣದಿಂದ ಕಾಂಟ್ರಾಸ್ಟ್ ಆಗಿರಲಿ. ಸಾಧಾರಣ ಮಕ್ಕಳಿಗೆ ಹಳದಿ ಚಿನ್ನದ್ದೇ ಆಭರಣವು ಚೆನ್ನಾಗಿ ಒಪ್ಪುತ್ತದೆ.

## ಜಾಲರಿಗಳು ಇರಲಿ

ಮಕ್ಕಳ ಕೈ, ಕಿವಿ, ಸರವಾಗಲಿ ಅದರಲ್ಲಿ ಜಾಲರಿಗಳು ಇದ್ದು ಓಲಾಡಬೇಕು. ಆಗಲೇ ಆಭರಣ ಬಹಳ ಸುಂದರವಾಗಿ ಮಕ್ಕಳಿಗೆ ಕಾಣುತ್ತದೆ. ಅದರ ಕೆಳಗೆ ಮುತ್ತು, ರೂಬಿಯ ಹರಳುಗಳು ಇದ್ದರೆ ಇನ್ನೂ ಸೊಗಸು.

ಒಟ್ಟಿನಲ್ಲಿ ಮಕ್ಕಳ ಆಭರಣ ಅವರು ತೊಟ್ಟಾಗ ನೋವು ಆಗಬಾರದು, ಬಿದ್ದು ಹಾಳಾಗಬಾರದು, ಚರ್ಮದೊಂದಿಗೆ ಹಿತವಾಗಿರಬೇಕು. ಅಂತಹ ಆಭರಣವೆಂದರೆ ಮಕ್ಕಳು ಧರಿಸುತ್ತಾರೆ. ಇಲ್ಲವಾದಲ್ಲಿ ಅವರು ತೊಟ್ಟುಕೊಳ್ಳಲು ಹಿಂದೇಟು ಹಾಕುತ್ತಾರೆ. ಈ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಖರೀದಿಸಬೇಕು. ಕಿವಿಯೋಲೆಯ ತಿರುಪುಗಳನ್ನು 18 ಕ್ಯಾರಟ್ ಚಿನ್ನದಲ್ಲಿ ಮಾಡಿಸಿಕೊಂಡರೆ ತಿರುಪು ಉದುರಿ ಹೋಗುವುದಿಲ್ಲ. ಕಿವಿಯೋಲೆಯ ಹಿಂದಿನ ದಂಡೆ ಸಪೂರವಾಗಿರಬೇಕು. ಮಕ್ಕಳ ಕಿವಿ ತೂತು ಸಾಮಾನ್ಯವಾಗಿ ಚಿಕ್ಕದಾಗಿರುತ್ತದೆ. ದಪ್ಪದ ದಂಡೆಯನ್ನು ಹೊಂದಿದ ಕಿವಿಯೋಲೆ ನೋವಾಗುತ್ತದೆ. ರಕ್ತ ಕೂಡಾ ಬರುತ್ತದೆ. ಅನಂತರ ಎರಡು ದಿನ ನೋವು ಇರುತ್ತದೆ. ಅನಂತರ ಮಕ್ಕಳು ಓಲೆ ಹಾಕಲು ಬಿಡುವುದಿಲ್ಲ. ಯಸ್ ಹುಕ್‌ನ ಆಭರಣ ಧರಿಸಬಹುದು. ಆಗ ಹಿಂಬದಿಯಿಂದ ರಬ್ಬರ್‌ನ (ಕಿವಿಯ ಹಿಂದಿನ ಭಾಗಕ್ಕೆ ಹಾಕುವ ತೂತು ಇರುವ ರಬ್ಬರ್) ತುಂಡನ್ನು ಹಾಕಿ ಭದ್ರ ಮಾಡಿಕೊಳ್ಳಬಹುದು. ಇದು ಹಿತವಾಗಿರುತ್ತದೆ.